ಶ್ರೀ ಆರ್. ಎನ್. ನಾಯಕ್.—ಮಾನ್ಯ ಮಂತ್ರಿಗಳು ಹೇಳಿದ ವಿಚಾರದಲ್ಲಿ ನನಗೆ ಸಂತೋಷವಾಗಿದೆ. ರೆಕಾರ್ಡಿನಲ್ಲಿ ರೆವಿನ್ಯೂ ಲ್ಯಾಂಡ್ ಎಂದು ಇದ್ದರೂ ಕೂಡ ಫಾರೆಸ್ಟ್ ಇಲಾಖೆಗೆ ಹೋಗಿದೆ ಎಂದು ಮಂಜೂರು ಕೊಡುವಾಗ ಸರಕಾರೀ ಅಧಿಕಾರಿಗಳು ತೋರಿದರೆ ಕೊಡುತ್ತಾರೆ ಇಂತಹ ವಿಚಾರದಲ್ಲಿ ಸುತ್ಕೋಲೆ ಹೊರಡಿಸಿ ಇದು ರೆವಿನ್ಯೂ ಲ್ಯಾಂಡ್. ಫಾರೆಸ್ಟ್ ಇಲಾಖೆಯದಲ್ಲ ಎಂದು ತಿಳಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಒಂದೇ ಜಮೀನು ಅಲ್ಲ. ೨೫ ಲಕ್ಷ ಎಕರೆ ಬಗ್ಗೆ ಸರಕಾರೀ ಆಜ್ಞೆಯಾಗಿದೆ. ಬಹುತೇಕ ಜಮೀನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಖಾತೆ ಬದಲಾವಣೆಯಾಗಿದೆ ಆ ಆಜ್ಞೆಯನ್ನು ಪುನರ್ ವಿಮರ್ಶೆ ಮಾಡುವುದು ಕೇಂದ್ರ ಸರಕಾರದ ಅಧಿಕಾರಕ್ಕೆ ಬರುತ್ತದೆಂದು ಅಭಿಪ್ರಾಯ ಇತ್ತು ಆ ಅಭಿಪ್ರಾಯ ನನ್ನದು ಅಲ್ಲ. ಕೆಲವು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಏನು ವರ್ಗಾವಣೆ ಮಾಡಿದ್ದಾರೆ. ಎಲ್ಲಿ ಅತಿಕ್ರಮಣ ಮಾಡಿದ್ದಾರೆ, ಅದನ್ನು ವಾಪಸ್ ತೆಗೆದುಕೊಂಡು ಸಕ್ರಮಗೊಳಿಸತಕ್ಕಂತಹ ವಿಚಾರದ ಮಸೂದೆ ಈ ಮನೆಯ ಮುಂದೆ ಇದೆ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರೊಳಗೆ ಏನು ಇದೆ ಕನ್ಸ್ಟ್ರಕ್ಷನ್ ಬಗ್ಗೆ ಮಾತ್ರ ನಾನು ಕೇಳಿರುವುದು.

ಶ್ರೀ ಜಿ. ಬಸವಣ್ಣಪ್ಪ.—ಕೆಲವು ಜಿಲ್ಲೆಗಳಿಂದ ಎನ್.ಆರ್.ಇ.ಪಿ. ಯೋಜನೆಗಳ ಬಗ್ಗೆ ವಿವರ ಬರಬೇಕಾಗಿದೆ. I agree, it is an important question you can renew this question. I have asked for detailed information.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಾಗಿದ್ದರೆ ೩೦ನೇ ತಾರೀಖು ತೆಗೆದುಕೊಳ್ಳಿ.

ಸರಕಾರಿ ಆದೇಶದ ಸಂಖ್ಯೆ ಎಸ್. ಡಬ್ಲ್ಯೂ. ಎಲ್. ೧೯೪ ಎಸ್. ಇ, ಡಬ್ಲ್ಯೂ. ೮೩.

೧೦೩೭. ಶ್ರೀ ಗೋಪಾಲಮಯ್ಯಂದ ಕಾನಡೆ(ಸಿರ್ಸಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆದೇಶ ಸಂಖ್ಯೆ ಎಸ್. ಡಬ್ಲ್ಯೂ. ಎಲ್. ೧೯೪ ಎಸ್.ಇ.ಡಬ್ಲ್ಯೂ. ೮೩ ದಿನಾಂಕ ೨೬-೧೧-೧೯೮೩ರ ಪ್ರಕಾರ ಬುಡಕಟ್ಟು (ಆಲೆಮಾರಿ ಜನಾಂಗ) ಜನಾಂಗದವರಿಗೆ ಕೊಡಲಾಗುತ್ತಿರುವ ವಿಶೇಷ ಸೌಲಭ್ಯವನ್ನು ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಅದಕ್ಕೆ ಕಾರಣವೇನು? ಹಾಗೂ ಅದನ್ನು ಪುನ: ಜಾರಿಗೊಳಿಸಲಾಗುವುದೆ?

ಆ) ಆಲೆ ಮಾರಿ ಜನಾಂಗಕ್ಕೆ ಸರಕಾರದವರು ಸಾಮಾಜಿಕವಾಗಿ, ಆರ್ಥಿಕವಾಗಿ ಯಾವ ವಿಧವಾದ ಸೌಲಭ್ಯ ನೀಡುತ್ತಿದ್ದಾರೆ.

ಇ) ಗ್ರೂಫ್ ಎ ಜನಾಂಗದವರಿಗೆ ಆದಾಯ ಮಿತಿ ಇರುವುದಿಲ್ಲ ಆದರೆ ಹಿಂದುಳಿದ ಇಲಾಖೆಯ ನಿರ್ದೇಶಕರು ಸರಕಾರದ ಆದೇಶದ ವಿರುದ್ಧವಾಗಿ ಆದಾಯ ಮಿತಿ ಹೇರಲು ಶಿಫಾರಸ್ಸು ಮಾಡಿರುವುದು ನಿಜವೆ.

ಈ) ನೋಮಿಡಿಕ್, ಅಂಡ್ ಡೀ ನೋಟಿಫೈಡ್ ಟ್ರೈಬ್ಸ್ (ಬುಡಕಟ್ಟು ಜನಾಂಗ, ಬಿ ಟಿ) ಇವರಿಗೆ ಪ್ರತ್ಯೇಕ ಸೌಲಭ್ಯದ ಬಗ್ಗೆ, ಇದುವರೆಗೂ ಯಾವುದೇ ವಿಶೇಷ ಯೋಜನೆ ರೂಪಿಸಿ ಕಾರ್ಯಗತ ಮಾಡಿರುವುದಿಲ್ಲ ದಿರುವುದಕ್ಕೆ ಕಾರಣವೇನು?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು

ವಿವರಗಳನ್ನು ಅನುಬಂಧ (೧) ರಲ್ಲಿ ನೋಡಬಹುದು

ಆ) ಹೌದು

ವಿವರಗಳನ್ನು ಅನುಬಂಧ (೨) ರಲ್ಲಿ ನೋಡಬಹುದು.

ಇ) ಹೌದು
ಸರ್ಕಾರದ ಪರಿಶೀಲನೆಯಲ್ಲಿದೆ,

ಈ) ಉದ್ಭವಿಸುವುದಿಲ್ಲ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಆರ್ಥಿಕ ಪ್ರಸ್ತುತ ೨೬ ಯೋಜನೆಗಳು ಜಾರಿಯಲ್ಲಿವೆ. ಅವುಗಳಲ್ಲಿ ಅನುಬಂಧ-೨ರಲ್ಲಿ ತೋರಿಸಿರುವ ೧೧ ಯೋಜನೆಗಳು ಹಿಂದುಳಿದ ಮುಡಕಟ್ಟು : ಎ ಸಮೂಹದ ಜನಾಂಗದವರಿಗೆಂದು ಕಾದಿರಿಸಿ ಕಾರ್ಯಗತಗೊಳಿಸಲಾಗುತ್ತಿದೆ,

ಅನುಬಂಧ-೧

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಆರ್ಥಿಕಾಭಿವೃದ್ಧಿಗಾಗಿ ೧೯೭೭-೭೮ರಿಂದ ಅಸ್ತಿತ್ವಕ್ಕೆ ಬಂದಿದೆ. ಇದಕ್ಕೂ ಮುಂಚೆ ಕೆಳ ಕಾಣಿಸುವ ಸೌಲಭ್ಯಗಳನ್ನು ಹಿಂದುಳಿದ ಮುಡಕಟ್ಟಿನವರಿಗೆ ಸಮಾಜ ಕಲ್ಯಾಣ ನಿರ್ದೇಶನಾಲಯದಿಂದ ನೀಡಲಾಗುತ್ತಿತ್ತು.

೧) ಪಿ. ಎಲ್. ಡಿ. ಬ್ಯಾಂಕ್ ಮತ್ತು ಸಹಕಾರ ಸಂಘಗಳ ಸದಸ್ಯತ್ವ ನೀಡುವುದು.

೨) ವ್ಯವಸಾಯಗಾರರಿಗೆ ಧನ ಸಹಾಯ

೩) ಎತ್ತುಗಳನ್ನು ಕೊಂಡುಕೊಳ್ಳಲು ಧನ ಸಹಾಯ

೪) ಸಹಕಾರ ಸಂಘಗಳಲ್ಲಿ ನೊಂದಾಯಿಸಿಕೊಳ್ಳಲು ಧನ ಸಹಾಯ (ಡಿ. ಟಿ. ಜನಾಂಗ)

೫) ಪಿ. ಎಲ್. ಡಿ. ಬ್ಯಾಂಕ್‌ಗಳಲ್ಲಿ ನೊಂದಾಯಿಸಿಕೊಳ್ಳಲು ಧನ ಸಹಾಯ (ಡಿ.ಟಿ.ಜನಾಂಗ)

೬) ಪಿ. ಎಲ್. ಡಿ. ಬ್ಯಾಂಕುಗಳಲ್ಲಿ ನೋದಾಯಿಸಿಕೊಳ್ಳಲು ಎನ್. ಟಿ. ಜನಾಂಗದವರಿಗೆ ಧನ ಸಹಾಯ.

೭) ಐ. ಟಿ. ಐ. ಮತ್ತು ಐ. ಟಿ. ಸಿ. ಗಳಲ್ಲಿ ತರಬೇತಿ ಪಡೆಯುವ ಎನ್. ಟಿ. ವಿದ್ಯಾರ್ಥಿಗಳಿಗೆ ಸಹಕಾರ ಸ್ಟೈಪೆಂಡ್ ನೀಡುವಿಕೆ.

೮) ಐ. ಟಿ. ಐ. ಮತ್ತು ಐ. ಟಿ. ಸಿ. ಗಳಲ್ಲಿ ತರಬೇತಿ ಪಡೆಯುವ ಡಿ. ಟಿ. ವಿದ್ಯಾರ್ಥಿಗಳಿಗೆ ಸ್ಟೈಪೆಂಡ್ ನೀಡುವಿಕೆ.

ಮೇಲಿನ ಸೌಲಭ್ಯಗಳನ್ನು ಯೋಜನೆಗಳನ್ನು ೧೯೮೧-೮೨ ನೇ ಸಾಲಿನಿಂದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಆರ್ಥಿಕಾಭಿವೃದ್ಧಿಯಂವತಿಯಿಂದ ನಡೆಸಲಾಗುತ್ತಿತ್ತು.

೧೯೮೩ರಲ್ಲಿ ನಡೆದ ಆರ್ಥಿಕ ಮತ್ತು ಯೋಜನಾ ಕೌನ್ಸಿಲ್ ಸಮಿತಿಯೂ ನಡೆಸಿದ ಸಮೀಕ್ಷೆಯಲ್ಲಿ ಮೇಲಿನ ಯೋಜನೆಗಳನ್ನು ಮುಂದುವರೆಸುವುದು ಆರ್ಥಿಕ ಹಿತದೃಷ್ಟಿಯಿಂದ ಸಮಂಜಸವಲ್ಲವೆಂದು ತಿಳಿದುಬಂದ ಕಾರಣ ಇವುಗಳ ರದ್ದು ಮಾಡುವಿಕೆಗೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದ ಕಾರಣ ಆದೇಶ ಸಂಖ್ಯೆ ಎಸ್. ಡಬ್ಲ್ಯೂ. ಎಲ್. ೧೯೪ ಎಸ್. ಇ. ಡಬ್ಲ್ಯೂ. ಕೆಸಿ ದಿನಾಂಕ ೨೨-೧೦-೧೯೮೫ರಲ್ಲಿ ರದ್ದು ಪಡಿಸಲಾಯಿತು.

ಇದು ಅಲ್ಲದೆ ನೇಗಿಲು ಭಾಗ್ಯ ಯೋಜನೆಯಡಿಯಲ್ಲಿ ವ್ಯವಸಾಯದ ಉಪಕರಣಗಳನ್ನು ಮತ್ತು ಎತ್ತುಗಳನ್ನು ಕೊಂಡುಕೊಳ್ಳಲು ಅರೆಮಾರಿ ಜನಾಂಗದವರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಈ ಯೋಜನೆಯೂ ಡಿ. ಆರ್. ಡಿ. ಎನ್. ನಿಂದ ಕಾರ್ಯಗತವಾಗುತ್ತಿದ್ದು ಸಾಕಷ್ಟು ಪಣ ಆ ಯೋಜನೆಯಲ್ಲಿರುವುದರಿಂದ ಸದರಿ ಯೋಜನೆಯನ್ನು ಹಿಂದುಳಿದ ವರ್ಗಗಳ ಆರ್ಥಿಕಾಭಿವೃದ್ಧಿಯಲ್ಲಿ ರದ್ದುಪಡಿಸಲಾಗಿದೆ.

ಜನತಾ ಮನೆಗಳ ಕಾರ್ಯಕ್ರಮಗಳಲ್ಲಿ ಮತ್ತು ಹುಡ್ಕೋ ಹೌಸಿಂಗ್ ಕಾರ್ಯಕ್ರಮಗಳಲ್ಲಿ ಡಿ. ಟಿ. ಮತ್ತು ಎನ್. ಟಿ. ಜನಾಂಗದವರು ಇತರೆ ಎಲ್ಲಾ ವರ್ಗದ ಜನರು ಈ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಳ್ಳಲು ಧನ ಸಹಾಯ ನೀಡುತ್ತದೆ. ಆದ್ದರಿಂದ ಸದರಿ ಯೋಜನೆಯನ್ನು ಹಿಂದುಳಿದ ವರ್ಗಗಳ ಆರ್ಥಿಕಾಭಿವೃದ್ಧಿಯಲ್ಲಿ ರದ್ದು ಪಡಿಸಲಾಗಿದೆ.

ಸಹಕಾರ ಸಂಘಗಳಿಗೆ ಮತ್ತು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಹೆಸರುಗಳನ್ನು ಸದಸ್ಯತ್ವಕ್ಕಾಗಿ ನೊಂದಾಯಿಸಲು ನೀಡುತ್ತಿದ್ದ ಧನ ಸಹಾಯ ಹಾಗೂ ವ್ಯವಸಾಯದ ಉಪಕರಣಗಳನ್ನು ಮತ್ತು ಎತ್ತುಗಳನ್ನು ಕೊಂಡುಕೊಳ್ಳಲು ನೀಡಲಾಗುತ್ತಿದ್ದ ಧನ ಸಹಾಯ ಹಾಗೂ ಡಿ. ಟಿ. ಮತ್ತು ಎನ್. ಟಿ. ಜನಾಂಗದವರು ಪೆನಿಗಳನ್ನು ಕಟ್ಟಿಕೊಳ್ಳಲು ನೀಡುತ್ತಿದ್ದ ಧನ ಸಹಾಯ ಈ ಎಲ್ಲ ಯೋಜನೆಗಳು ಇಂದು ಸಹ ಆಯಾ ಜಿಲ್ಲೆಗಳಲ್ಲಿ ಕಾರ್ಯಗತವಾಗುತ್ತಿರುತ್ತವೆ. ಮತ್ತು ಆಯಾ ಜಿಲ್ಲಾ ಪರಿಷತ್ತಿನ ಆಡಳಿತ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಆಯಾಯ ಇಲಾಖೆಗಳ ಮಂಖ್ಯಾಂತರ ರಾಜ್ಯದ ಎಲ್ಲಾ ವರ್ಗದವರು ಸದರಿ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಆದಕಾರಣ ಪುನ; ಇಲಾಖೆಯಲ್ಲಿ ಮಂತ್ರಿ ಜಾರಿಗೊಳಿಸುವ ಆಲೋಚನೆ ಇರುವುದಿಲ್ಲ.

ಅನುಬಂಧ–೨

ಸರ್ಕಾರಿ ಆದೇಶ ಸಂಖ್ಯೆ ಪಿ. ಹೆಚ್. ಎಸ್. ೨೬೨ ಎನ್. ಇ. ಡಬ್ಲ್ಯೂ. ೬೫ ದಿನಾಂಕ ೧–೨–೬೬ ಆದೇಶದ ಅನುಬಂಧದಲ್ಲಿ ಸೂಚಿಸಿದ ನೊಮಾಡಿಕ್ ಮತ್ತು ಸೆಮಿ–ನೊಮಾಡಿಕ್ ಬಂಡಕಟ್ಟಿನವರನ್ನೂ ಹಾಗೂ ಆದೇಶ ಸಂಖ್ಯೆ ಪಿ. ಅಂಡ್ ಡಿ ೧೪೮ ಎಸ್. ಎ. ಡಿ. ೬೦ ದಿನಾಂಕ ೨೭–೧–೧೯೬೨ರ ಅನುಬಂಧದಲ್ಲಿ ಸೂಚಿಸಿರುವ ಡಿ ನೊಟಿಫೈಡ್ ಬಂಡಕಟ್ಟಿನವರನ್ನೂ ಹಾವನೂರು ಆಯೋಗದ ಶಿಫಾರಸ್ಸಿನಂತೆ ಹೊರಡಿಸಲಾದ ಹಿಂದುಳಿದ ವರ್ಗಗಳ ವರ್ಗೀಕರಣ ಪಟ್ಟಿ (ಆದೇಶ ಸಂಖ್ಯೆ ಎಸ್. ಡಬ್ಲ್ಯೂ. ಎಲ್. ೧೨೧ ಟಿ. ಬಿ. ಎಸ್ ೨೭. ದಿನಾಂಕ ೨೨–೨–೧೯೭೭) ಪಟ್ಟಿಯಲ್ಲಿ ಹಿಂದುಳಿದ ಬಂಡಕಟ್ಟಿನವರೆಂದು ಗುರುತಿಸಲಾಗಿದೆ. ದಿನಾಂಕ ೧೩–೧೦–೮೬ರಲ್ಲಿ ಹೊರಡಿಸಿದ ಆದೇಶದ ಈ ಹಿಂದೆಳಿದ ಬಂಡಕಟ್ಟಿನ ಜನಾಂಗವನ್ನು ''ಎ ಸಮೂಹ'' ಎಂದು ಗುರುತಿಸಲಾಗಿದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳು ಹಿಂದುಳಿದ ಬಂಡಕಟ್ಟಿನ ಜನಾಂಗದವರಿಗಾಗಿ ಕಾರ್ಯಗತವಾಗುತ್ತಿವೆ.

೧ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ

೨ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ

೩ ಹಿಂದುಳಿದ ಬಂಡಕಟ್ಟು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚಗಳ ನೀಡಿಕೆ

೪ ಅಧ್ಯಯನ ಪ್ರವಾಸ ವೆಚ್ಚ ನೀಡಿಕೆ

೫ ಕಾಪ್ಪ ಟ್ರೈನಿಂಗ್ ಸೆಂಟರ್

೬ ಮಹಿಳಾ ಕಲ್ಯಾಣ ಕೇಂದ್ರಗಳು (ಡಿಟಿ ಎನ್‌ಟಿ ಮತ್ತು ಎಸ್ ಎನ್ ಟಿ)

೭ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುವ ಡಿಟಿ ಮತ್ತು ಎನ್ ಟಿ ಅಭ್ಯರ್ಥಿಗಳಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ನೀಡುವುದು.

೮ ಡಿಟಿ. ಎನ್. ಟಿ. ಮತ್ತು ಎಸ್. ಎನ್. ಟಿ. ಆಶ್ರಮ ಶಾಲೆಗಳ ನಿರ್ವಹಣೆ.

೯ ಖಾಸಗಿ ಸಂಸ್ಥೆಯವರು ನಡೆಸುತ್ತಿರುವ ಡಿಟಿ ಮತ್ತು ಎನ್. ಟಿ. ಮತ್ತು ಎಸ್. ಎನ್. ಟಿ. ವಸತಿ ನಿಲಯಗಳಿಗೆ ಧನ ಸಹಾಯ ನೀಡಿಕೆ.

೧೦ ಸರ್ಕಾರಿ ಡಿ. ಟಿ. ಹಾಸ್ಪೆಲ್‌ಗಳು

೧೧ ಮಂರಗೆಲಸ ಹಾಗೂ ಉತ್ಪಾದನಾ ಕೇಂದ್ರದಲ್ಲಿ ತರಬೇತಿ ನೀಡುವುದು ಮೇಲೆ ತಿಳಿಸಿದ ಎಲ್ಲಾ ಯೋಜನೆಗಳಲ್ಲದೆ ಇಲಾಖೆಯಲ್ಲಿ ಕಾರ್ಯಗತವಾಗುತ್ತಿರುವ ಇತರೆ ಯೋಜನೆಗಳ ಶೇಕಡ ೫ ರಷ್ಟು ಸ್ಥಾನವನ್ನು ಈ ಜನಾಂಗದವರಿಗೆ ಕಾದಿರಿಸಲಾಗಿದೆ.

ಶ್ರೀ ಗೋಪಾಲ ಮುಕಂದ ಕಾನಡೆ.—ನನ್ನ ಮೂರನೇ ಪ್ರಶ್ನೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ೧೯೫೩ನೇ ಇಸವಿಯಿಂದ ಈವರೆಗೂ ಆ ಜನರಿಗೆ ಸರ್ಕಾರ ಯಾವ ರೀತಿಯ ಅಭಿವೃದ್ಧಿ ಕೆಲಸವನ್ನೂ ಮಾಡಿಲ್ಲ, ನಿಮ್ಮ ಅಧಿಕಾರಿಗಳು ಸರಕಾರದ ವಿರುದ್ಧವಾಗಿ ಕೆಲಸ ಮಾಡಿದ್ದಾರೆ. ಅವರ

ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ, ೧೯೮೩ನೇ ಇಸವಿಯಲ್ಲಿ ಬಡವರಿಗೆ ಸಿಗುವಂತಹ ಸೌಲಭ್ಯಗಳನ್ನು ಅಧಿಕಾರಿಗಳು ಅಪಹರಿಸಿದ್ದಾರೆ, ಇಲ್ಲಿಯವರೆಗೂ ಅವರಿಗೆ ಸೌಲಭ್ಯ ಸಿಕ್ಕಿಲ್ಲ. ಒಂದು ವರ್ಗಕ್ಕೆ ಮಾತ್ರ ಅಲ್ಲ ಎಲ್ಲ ವರ್ಗದವರಿಗೂ ಅಧಿಕಾರಿಗಳು ಅನ್ಯಾಯ ಮಾಡಿದ್ದಾರೆ. ಅದರ ಬಗ್ಗೆ ನೀವು ಹೇಳಿದ ದಾಖಲೆಗಳು ಇವೆ ಅವರನ್ನು ಸಸ್ಪೆಂಡ್ ಮಾಡುತ್ತೀರೋ ಇಲ್ಲವೇ ಅವರಿಗೆ ಪ್ರಮೋಷನ್ ಕೊಡುತ್ತೀರೋ? ಯಾರಿಗೆ ಇದು ಮುಟ್ಟಬೇಕಾಗಿತ್ತೋ ಅವರಿಗೆ ಮುಟ್ಟದ ಹಾಗೆ ಅಧಿಕಾರಿಗಳು ಮಾಡಿದ್ದಾರೆ ಬಡವರ ಬಾಯಿಯ ತುತ್ತನ್ನು ಹೊಡೆದಿದ್ದಾರೆ. ಆ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತೀರೋ ಇಲ್ಲವೇ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ ಇಷ್ಟು ಮಾತ್ರ ಹೇಳಿ. ಇನ್ನೇನೂ ಹೇಳಬೇಕಾಗಿಲ್ಲ ರಕ್ಷಣೆ ಕೊಡುತ್ತೇವೆ. ಇಲ್ಲದಿದ್ದರೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿ.

ಶ್ರೀ ಜಿ. ಬಸವಣ್ಣಪ್ಪ.—ಹಿಂದೆ ನೋಮಿಡಿಕ್ ಅಂಡ್ ಡೀ ನೋಟಿಫೈಡ್ ಟ್ರೈಬ್ಸ್ ಎಂದು ಇತ್ತು ಹಾವನೂರ್ ಆಯೋಗ ೭೭ರಲ್ಲಿ ಬಂದ ಮೇಲೆ ಬ್ಯಾಕ್‌ವರ್ಡ್ ಟ್ರೈಬ್ಸ್ ಎಂದು ಆಯಿತು ೮೩ರಲ್ಲಿ ತಾತ್ಕಾಲಿಕ ವಿಂಗಡಣಾ ಆಜ್ಞೆಯಾದಾಗ ಎ ಗ್ರೂಪ್ ಎಂದು ಆಗಿದೆ. ನೋಮಿಡಿಕ್, ಅಂಡ್ ಡೀ ನೋಟಿಫೈಡ್ ಟ್ರೈಬ್ಸ್ ಇವರಿಗೆ ವಿಶೇಷ ಸವಲತ್ತುಗಳು ಹಿಂದೆ ಇದ್ದವು.

ಆ ಸವಲತ್ತುಗಳನ್ನು ನಾವು ಮೊದಲಿನಿಂದ ಕೊಡುತ್ತಾ ಬಂದಿದ್ದೇವೆ. ೧೯೮೧–೮೨, ೧೯೮೨–೮೩, ರಲ್ಲಿ ಡಿ-ನೋಟಿಫೈಡ್ ನೊಮ್ಯಾಡಿಕ್ ಟ್ರೈಬ್ಸ್ ಅವರಿಗೆ ಕೊಡತಕ್ಕಂಥ ಸೌಲಭ್ಯಗಳನ್ನು ೮೩ರ ಆಜ್ಞೆ ಪ್ರಕಾರ ರದ್ದು ಮಾಡಿದ್ದೇವೆ, ಏಕೆಂದರೆ ಬೇರೆ ಕಾರ್ಯಕ್ರಮಗಳಿಂದ ಆ ಜನಗಳಿಗೆ ಸಹಾಯವಾಗುತ್ತಿದೆ. ೮೧–೮೨, ೮೨–೮೩ರಲ್ಲಿ ಆ ಜನಗಳಿಗೆ ಸಹಾಯ ಮುಟ್ಟಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ೧೯೮೨–೮೩ರಲ್ಲಿ ಅಲೆಮಾರಿ ಜನಾಂಗದವರಿಗೆ ಕೃಷಿ ಉಪಕರಣಗಳಿಗಾಗಿ ೧.೫೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ೮೨–೮೩ರಲ್ಲಿ ೧.೬೧ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಅಲೆಮಾರಿ ಜನಾಂಗದವರಿಗೆ ಇದಲ್ಲದೇ ಎತ್ತು ಗಾಡಿಗಳನ್ನು ಕೊಳ್ಳಲಿಕ್ಕೆ ೮೧–೮೨ರಲ್ಲಿ ೨೫ ಸಾವಿರ ಮತ್ತು ೮೨–೮೩ರಲ್ಲಿ ೧.೬೨ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮನೆ ಕಟ್ಟಿಕೊಳ್ಳುವುದಕ್ಕೆ ೮೧–೮೨ರಲ್ಲಿ ೫೦ ಸಾವಿರ ರೂಪಾಯಿ, ೮೨–೮೩ರಲ್ಲಿ ೧.೬೯ ಲಕ್ಷ ರೂಪಾಯಿ, ಮನೆ ಕಟ್ಟಿಕೊಳ್ಳಲಿಕ್ಕೆ ಧನ ಸಹಾಯ ಎಂದು ೮೧–೮೨ರಲ್ಲಿ ಒಂದು ಲಕ್ಷ ರೂಪಾಯಿ ಈ ರೀತಿ ಅವರಿಗೆ ಸಹಾಯ ಮಾಡಿದ್ದೇವೆ, ಮಾನ್ಯ ಸದಸ್ಯರು ಮಾಡಿಲ್ಲ ಎಂದು ಹೇಳಿದ್ದಾರೆ, ಆದರೆ ಇದು ತಪ್ಪು. ಈ ಯೋಜನೆಯ ಸಹಾಯ ಜನಗಳಿಗೆ ಮುಟ್ಟಿಲ್ಲ. ಆದ್ದರಿಂದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಆ ಯೋಜನೆಯ ಹಣವನ್ನು ಸರಿಯಾಗಿ ಸದುಪಯೋಗ ಮಾಡದೆ ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಆದ್ದರಿಂದ ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮೇಲೆ ಹೇಳಿರುವಂತೆ ಈ ರೀತಿ ಸಹಾಯ ಆಗಿರುವುದರಿಂದ ಆ ಅಧಿಕಾರಗಳ ಮೇಲೆ ಕ್ರಮ ಕೈಗೊಳ್ಳತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗೋಪಾಲ ವಂಕುಂದ ಕಾನಡೆ.—೮೧–೮೨, ೮೨–೮೩ರವರೆಗೆ ಹೇಳಿದ್ದೀರಿ. ೮೩ ರಿಂದ ೮೭ರವರೆಗೆ ಎಷ್ಟರ ಮಟ್ಟಿಗೆ ಅವರಿಗೆ ಸಹಾಯ ಮಾಡಲಾಗಿದೆ ಎನ್ನುವ ಲಿಸ್ಟನ್ನು ಕೊಡಿ.

ಶ್ರೀ ಜಿ. ಬಸವಣ್ಣಪ್ಪ.—೮೩ರಲ್ಲಿ ಅಲೆಮಾರಿ ಜನಗಳಿಗೆ ಈ ಆಜ್ಞೆ ರದ್ದಾದ ಮೇಲೆ ಅವರಿಗೆ ಬೇರೆ ರೀತಿಯಲ್ಲಿ ಸಹಾಯ ಮಾಡಿದ್ದೇವೆ. ಒಟ್ಟು ೧೧ ಕಾರ್ಯಕ್ರಮಗಳು ಇದ್ದವು,

ಶ್ರೀ ಗೋಪಾಲ ವುಂಕುಂದ ಕಾನಡೆ.—೮೧–೮೨ ಹಾಗೂ ೮೨–೮೩ರಲ್ಲಿ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ೮೩ರನಂತರ ಎತ್ತು ಗಾಡಿಕೊಳ್ಳಲಿಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಯಾವ ಯಾವ ಬ್ಯಾಂಕಿನಿಂದ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ. ೮೩ರಲ್ಲಿ ಆಜ್ಞೆಯನ್ನು ಸರ್ಕಾರವೇ ಮಾಡಿದೆಯೋ ಅಥವಾ ಅಧಿಕಾರಿಗಳೇ ಅದನ್ನು ಕ್ಯಾನ್ಸಲ್ ಮಾಡಿದ್ದಾರೋ?

ಶ್ರೀ ಜಿ. ಬಸವಣ್ಣಪ್ಪ —ಆ ಆಜ್ಞೆಯನ್ನು ರದ್ದು ಮಾಡಿದ್ದು ಸರ್ಕಾರ. ಇದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಲಾಗಿತ್ತು. ಈ ಕಾರ್ಯಕ್ರಮಗಳಲ್ಲದೇ ಡಿ.ಆರ್.ಡಿ.ಎಸ್. ಎಂದು ಒಂದು ಕಾರ್ಯಕ್ರಮ ಕೂಡಾ ಇದೆ. ಈ ಕಾರ್ಯಕ್ರಮದ ಸಹಾಯ ಆ ಬುಡಕಟ್ಟು ಜನಾಂಗದವರಿಗೆ ಮುಟ್ಟುವುದರಿಂದ ಅವರಿಗೆ ಸಹಾಯವಾಗುತ್ತಿದೆ.

ಶ್ರೀ ಗೋಪಾಲ ವಂಕುಂದ ಕಾನಡೆ.—ಸಂಬಂಧಪಟ್ಟ ಅಧಿಕಾರಿಗಳೇ ಈ ಆಜ್ಞೆಯನ್ನು ರದ್ದು ಮಾಡಿದ್ದಾರೆ, ಸರ್ಕಾರ ಇದನ್ನು ವೈಯುಕ್ತಿಕವಾಗಿ ಮಾಡಿಲ್ಲ. ಇದನ್ನು ನೀವೇ ಒಪ್ಪಿದ್ದೀರಿ.

ಶ್ರೀ ಜಿ, ಬಸವಣ್ಣಪ್ಪ.—ಇಲ್ಲ, ಇಲ್ಲ. ಈಗ ಅದು ಏನಾಗಿದೆ ಎಂದರೆ...

ಶ್ರೀ ಗೋಪಾಲ ಮುಕುಂದ ಕಾನಡೆ.—ಅದನ್ನು...

ಅಧ್ಯಕ್ಷರು.—ನಾಲ್ಕು ಸಾರಿ ಉಪಪ್ರಶ್ನೆ ಕೇಳಿದ್ದೀರಿ ಕೂಡ್ರಿ. ತಾವು ಕೂಡ್ರಿ ಉತ್ತರ ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಕಾನಡೆಯವರ ಪ್ರಶ್ನೆ ಏನೆಂದರೆ, ಅಧಿಕಾರಿಗಳು ಅವರಿಗೆ ಯಾವ ಒಂದು ಸೌಲಭ್ಯ ಆ ಜನಗಳಿಗೆ ಸಿಕ್ಕಬೇಕಾಗಿತ್ತೋ ಅದನ್ನು ಸಿಗದ ಹಾಗೆ ಮಾಡಿದ್ದಾರೆ, ಮತ್ತು ಅದಕ್ಕೆ ಕಾರಣಕರ್ತರಾಗಿದ್ದಾರೆ ಎನ್ನತಕ್ಕಂಥದ್ದನ್ನು ನೀವು ಒಪ್ಪಿದ್ದೀರಿ, ಆ ರೀತಿ ತಪ್ಪು ಮಾಡುತ್ತಿರತಕ್ಕಂಥವರ ಮೇಲೆ ಏನು ಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಜಿ, ಬಸವಣ್ಣಪ್ಪ.—ಹಿಂದೆ ಇರತಕ್ಕಂಥ ಕಾರ್ಯಕ್ರಮವನ್ನು ಲಿಖಿತ ಆಜ್ಞೆಯ ಪ್ರಕಾರ ಆ ಕಾರ್ಯಕ್ರಮವನ್ನು ರದ್ದು ಮಾಡಿದ್ದೇವೆಂದು ಸರ್ಕಾರ ಒಪ್ಪಿದೆ. ಬೇರೆ ಕಾರ್ಯಕ್ರಮಗಳಿಂದ ಆ ಜನಗಳಿಗೆ ಸಹಾಯ ಸಿಗುತ್ತಿದೆ. ನಾವು ಒಪ್ಪಿದ್ದು ಏನು ಎಂದರೆ ಈ ಕಾರ್ಯಕ್ರಮಗಳನ್ನು ರದ್ದು ಮಾಡಿದ್ದೇವೆ, ಲಿಖಿತವಲ್ಲಿ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ಇದನ್ನು ರದ್ದು ಮಾಡಿದೆ ಎಂದು ಸರ್ಕಾರ ಒಪ್ಪಿದೆ ಎಂಬ ಹೇಳಿಕೆಯನ್ನು ಕೊಟ್ಟಿದ್ದೇವೆ.

ೇ. ಎಸ್. ಐ. ಯೋಜನೆಗೆ ವಂತಿಗೆ

೧೨೪೦. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೇ. ಎಸ್. ಐ. (ನೌಕರರ ರಾಜ್ಯ ವಿಮೆ)ನ್ನು ಸಂದಾಯ ಮಾಡುತ್ತಿರುವವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಪ್ರತ್ಯೇಕ ವಿವರಗಳನ್ನೊದಗಿಸುವುದು ?

ಆ) ಈಗ ೇ.ಎಸ್.ಐ.ಗೆ ವಂತಿಗೆ ಪಾವತಿ ಮಾಡದ ಖಾಸಗಿ ಸರ್ಕಾರಿ ಹಾಗೂ ಕೇಂದ್ರೋದ್ಯಮಗಳ ಸಂಖ್ಯೆ ಎಷ್ಟು ? (ಪ್ರತಿಯೋರ್ವರ ವಿವರಗಳು)

ಇ) ೇ. ಎಸ್. ಐ.ಗೆ ವಂತಿಗೆ ಮಾಡದ ಸಂಸ್ಥೆಗಳ ಮೇಲೆ ಸರ್ಕಾರದವರು ಕೈಗೊಂಡಿರುವ ಕಾನೂನು ಕ್ರಮ ಹಾಗೂ ಇಲಾಖಾ ಕ್ರಮಗಳೇನು ?

ಶ್ರೀ ಎಸ್. ಕೆ. ಕಾಂತಾ (ಮಾನ್ಯ ಕಾರ್ಮಿಕ ಸಚಿವರು).—

ಅ) ೇ.ಎಸ್.ಐ. ವಂತಿಗೆಯನ್ನು ಪಾವತಿ ಮಾಡುತ್ತಿರುವ ಉದ್ಯಮಗಳ ಸಂಖ್ಯೆ ೫೨೩೮. ಕಾರ್ಮಿಕರ ರಾಜ್ಯ ವಿಮಾ ನಿಗಮದವರು ಜಿಲ್ಲಾವಾರು ವಿವರಗಳನ್ನು ಪ್ರತ್ಯೇಕವಾಗಿ ಇಟ್ಟಿಲ್ಲ.

ಆ) ೨೭ ಖಾಸಗಿ, ೧೪ ರಾಜ್ಯ ಸರ್ಕಾರಿ ಮತ್ತು ಒಂದು ಕೇಂದ್ರೋದ್ಯಮ ೇ.ಎಸ್.ಐ.ಗೆ ವಂತಿಗೆ ಪಾವತಿ ಮಾಡಿಲ್ಲ. ವಿವರಗಳನ್ನು ಅನುಬಂಧ ೧ ಮತ್ತು ೨ ರಲ್ಲಿ ಕೊಡಲಾಗಿದೆ.

ಇ) ಹಣ ಪಾವತಿ ಮಾಡದಿರುವವರ ಮೇಲೆ ಸೆಕ್ಷನ್ ೪೦ಬಿ ಐ.ಪಿ.ಸಿ. ಮತ್ತು ಸೆಕ್ಷನ್ ೮೫ ೇ.ಎಸ್.ಐ. ಕಾಯಿದೆ, ೧೯೪೮ರ ಪ್ರಕಾರ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ. ಜಿಲ್ಲಾಧಿಕಾರಿಗಳಿಗೆ ಬಾಕಿ ಇರುವ ೇ.ಎಸ್.ಐ. ವಂತಿಗೆ ಹಣವನ್ನು ಭೂ ಕಂದಾಯದ ಬಾಕಿ ಹಣವೆಂದು ಪರಿಗಣಿಸಿ ವಸೂಲು ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.